# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,**

**ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.**

---

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 04.03.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ. ಡಾ|| ಮುರಳಿಧರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಜಿ.ನಾಗಭೂಷಣ್ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀಮತಿ.ಅನುಪಮ.ಡಿ, ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ತಿಪ್ಪೇನಹಳ್ಳಿ.
4. ಶ್ರೀ.ಎಂ.ಚಂದ್ರಶೇಖರ್ ಆರೋಗ್ಯ ನಿರೀಕ್ಷಣಾಧಿಕಾರಿ, ಪಿ.ಹೆಚ್.ಸಿ, ತಿಪ್ಪೇನಹಳ್ಳಿ.
5. ಶ್ರೀಮತಿ.ಪೂರ್ಣಿಮಾ.ಜಿ.ಬಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ, ಕೆಂಗೇರಿ
6. ಶ್ರೀ.ರಮೇಶ್.ಡಿ.ಎಂ, ಹಿರಿಯ . ಆರೋಗ್ಯ ಪರಿವೀಕ್ಷಕರು.
7. ಶ್ರೀ.ಮುತ್ತೇಗೌಡ.ವಿ ಕಿರಿಯ ಆರೋಗ್ಯ ಪರಿವೀಕ್ಷಕರು.
8. ಶ್ರೀ.ಅಮರನಾಥ್.ಎಂ, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
9. ಶ್ರೀ.ಪರಮೇಶಯ್ಯ. ಕಿರಿಯ ಅಭಿಯಂತರರು, ಬೆಸ್ಕಾಂ, ದೊಡ್ಡಬಿದರಕಲ್ಲು.
10. ಶ್ರೀ.ಪ್ರಕಾಶ್.ಕೆ.ಎನ್. ಕಿರಿಯ ಅಭಿಯಂತರರು, ಬೆಸ್ಕಾಂ, ಅಂದ್ರಹಳ್ಳಿ.
11. ಶ್ರೀ.ಗವಿಸಿದ್ದಯ್ಯ, ಸಹಾಯಕ ಅಭಿಯಂತರರು, ವಿದ್ಯುತ್ (ಬಿ.ಬಿ.ಎಂ.ಪಿ).
12. ಶ್ರೀಮತಿ.ಅಮೃತಸಾಯಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆ ವಿಭಾಗ.
13. ಶ್ರೀ.ಎಂ.ಸಿ.ಶಿವರಾಮು, ಸರ್ವೆ ಅಧೀಕ್ಷಕರು, ಬೆಂಗಳೂರು ಉತ್ತರ.
14. ಶ್ರೀ.ಆನಂದ್ ಪಾಡಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (ಪ್ರಾಜೆಕ್ಟ್).
15. ಶ್ರೀ.ಪವನ್.ಎಂ.ಬಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
16. ಶ್ರೀ.ಕೆ.ಶ್ರೀನಿವಾಸಯ್ಯ, ಸಹ ಕಂದಾಯ ಅಧಿಕಾರಿ, ಕಂದಾಯ ಇಲಾಖೆ.
17. ಶ್ರೀ.ಗುರುರಾಜ್.ಎ. ಕಂದಾಯ ಪರಿವೀಕ್ಷಕಕರು, ದೊಡ್ಡಬಿದರಕಲ್ಲು.
18. ಶ್ರೀ.ಕುಮಾರ್, ಕಂದಾಯ ಪರಿವೀಕ್ಷಕಕರು, ಹೊಸಹಳ್ಳಿ.
19. ಶ್ರೀ.ಸಂತೋಷ್ ಕುಮಾರ್, ಕಂದಾಯ ವಸೂಲಿಗಾರರು, ಕರಿಹೋಬನಹಳ್ಳಿ.
20. ಶ್ರೀ.ಚಿಕ್ಕಹನುಮಯ್ಯ, ಕಂದಾಯ ಪರಿವೀಕ್ಷಕಕರು.
21. ಶ್ರೀ.ಶಿವರುದ್ರಪ್ಪ, ಪಿ.ಎಸ್.ಐ, ಪೀಣ್ಯ ಪೋಲೀಸ್ ಠಾಣೆ (ಟ್ರಾಫಿಕ್).
22. ಶ್ರೀ.ಹನುಮೇಗೌಡ, ಎ.ಎಸ್.ಐ, ಪೀಣ್ಯ ಪೋಲೀಸ್ ಠಾಣೆ (ಟ್ರಾಫಿಕ್).
23. ಶ್ರೀ.ಬಾನುಪ್ರಕಾಶ್.ಎಸ್, ಪಿಎಸ್.ಐ, ಪೀಣ್ಯ ಪೋಲೀಸ್ ಠಾಣೆ.
24. ಶ್ರೀ.ಬೆಟ್ಟಸ್ವಾಮಿಗೌಡ, ಎ.ಎಸ್.ಐ, ಬ್ಯಾಡರಹಳ್ಳಿ ಪೋಲೀಸ್ ಠಾಣೆ.
25. ಶ್ರೀ.ಷಣ್ಮುಖಪ್ಪ, ಮೇಸ್ತ್ರಿ, ತೋಟಗಾರಿಕೆ ಇಲಾಖೆ.
26. ಶ್ರೀ.ಯೋಗೇಶ್.ಕೆ.ಆರ್, ಮಾರ್ಷಲ್. ದೊಡ್ಡಬಿದರಕಲ್ಲು.

ವಾರ್ಡ್ ಸಮಿತಿ ಸದಸ್ಯರುಗಳು.

1. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ, ಸದಸ್ಯರು.
2. ಶ್ರೀ.ಸತೀಶ್, ಹೊಸಹಳ್ಳಿ, ಸದಸ್ಯರು
3. ಶ್ರೀ.ಮಾಲತೇಶ್.ಹೆಚ್.ಬಿ, ದೊಡ್ಡಬಿದರಕಲ್ಲು, ಸದಸ್ಯರು.
4. ಶ್ರೀ.ಮಂಜುನಾಥ್.ಎಂ, ಚನ್ನನಾಯಕನಪಾಳ್ಯ, ಸದಸ್ಯರು.
5. ಶ್ರೀ.ಮುನಿನಾರಾಯಣಪ್ಪ, ಇಂದಿರಾನಗರ, ಸದಸ್ಯರು.
6. ಶ್ರೀ.ನಟರಾಜ್, ವಿದ್ಯಾಮಾನ್ಯನಗರ, ಸದಸ್ಯರು.
7. ಶ್ರೀ.ಗರುಡಪ್ಪ, ತಿಗಳರಪಾಳ್ಯ, ಸದಸ್ಯರು.
8. ಶ್ರೀಮತಿ.ಮಂಗಳಮ್ಮ, ಮಾರಣ್ಣ ಬಡಾವಣೆ, ಸದಸ್ಯರು.
9. ಶ್ರೀಮತಿ.ಸುಮಿತ್ರಮ್ಮ, ಸಾಯಿಬಾಬಾ ಲೇಔಟ್, ಸದಸ್ಯರು.
10. ಶ್ರೀಮತಿ.ಪುಟ್ಟಮ್ಮ, ತಿಗಳರಪಾಳ್ಯ, ಸದಸ್ಯರು.

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

1. ಶ್ರೀ.ರಮೇಶ್, ಪಶು ವೈದ್ಯರು.
2. ಶ್ರೀ.ಭಾನುಪ್ರಕಾಶ್, ಅರಣ್ಯ ಇಲಾಖೆ,
3. ಶ್ರೀ.ಶ್ರೀನಿವಾಸ.ಸಿ.ಪಿ. ವ್ಯವಸ್ಥಾಪಕರು, ಕಲ್ಯಾಣ ಇಲಾಖೆ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯಲ್ಲಿ ಎಲ್ಲಾ ಸದಸ್ಯರುಗಳು ಹಾಗೂ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯ ಉದ್ದೇಶವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳು ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

1) **ವಾರ್ಡ್ ವ್ಯಾಪ್ತಿಯಲ್ಲಿನ ಆರೋಗ್ಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಚಾರ.**

- ವಾರ್ಡ್ ವ್ಯಾಪ್ತಿಯಲ್ಲಿನ ತಿಪ್ಪೇನಹಳ್ಳಿ ಪ್ರಾರ್ಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂಧಿಸಿದಂತೆ ಡಾ॥ ಅನುಪಮ.ಡಿ. ವೈದ್ಯಾಧೀಕಾರಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ 4 ಉಪ ಆರೋಗ್ಯ ಕೇಂದ್ರವನ್ನು ತೆರೆಯಲು ಅವಕಾಶವಿದ್ದು, ಕೇಂದ್ರಕ್ಕೆ ಅನುಕೂಲವಾಗುವಂತೆ ಕಟ್ಟಡವನ್ನು ಗುರುತಿಸಿಕೊಟ್ಟಲ್ಲಿ ಉಪ ಆರೋಗ್ಯ ಕೇಂದ್ರವನ್ನು ತೆರೆಯಲು ಅಗತ್ಯ ಕ್ರಮವಹಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.
- ತಿಪ್ಪೇನಹಳ್ಳಿ ಪ್ರಾರ್ಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂಧಿಸಿದಂತೆ ಡಾ॥ ಅನುಪಮ.ಡಿ. ವೈದ್ಯಾಧೀಕಾರಿ ರವರು ಮಾತನಾಡಿ ಆರೋಗ್ಯ ಕೇಂದ್ರದ ಹಿಂಭಾಗದಲ್ಲಿ ಖಾಲಿ ಜಾಗವಿದ್ದು, ಸದರಿ ಕಟ್ಟಡವನ್ನು ಮತ್ತಷ್ಟು ವಿಸ್ತಾರ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
- ಶ್ರೀಮತಿ.ಪೂರ್ಣಿಮಾ.ಜಿ.ಬಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಹಾಗೂ ಶ್ರೀ.ಮುತ್ತೇಗೌಡ, ಕಿರಿಯ ಆರೋಗ್ಯ ಪರೀಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಟ್ಟಡಗಳನ್ನು ಸರ್ವೆ ಮಾಡಿಸಿದ್ದು, 2016-17 ನೇ ಸಾಲಿನ ಮೈಕ್ರೋ ಫ್ಲಾನ್‌ನ ಪ್ರಕಾರ 38,450 ಮನೆಗಳಿದ್ದು, ಈಗಿನ ಸರ್ವೆ ಪ್ರಕಾರ 74,704 ಮನೆಗಳು, 3,532 ಅಂಗಡಿಗಳು, 2,750 ಕಾರ್ಖಾನೆಗಳು, 15 ಬಾರ್‌ಗಳು, 8 ಕಲ್ಯಾಣ ಮಂಟಪಗಳು, 34 ಶಾಲೆಗಳು, 6 ಬ್ಯಾಂಕ್‌ಗಳು, 37 ದೇವಸ್ಥಾನಗಳು ಹಾಗೂ 10 ಹಾಸ್ಟೆಲ್‌ಗಳು ಇದ್ದು, ಹಾಗೂ 301 ಕಿ.ಮೀ ರಸ್ತೆ ಇರುತ್ತದೆ. ಆದುದರಿಂದ ವಾರ್ಡ್ ನಂ.40ರ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯ ಪೌರ ಕಾರ್ಮಿಕರು ಹಾಗೂ ಕಸದ ಗಾಡಿಗಳು ಅಗತ್ಯವಿರುತ್ತದೆ ಎಂದು ಸಭೆಯಲ್ಲಿ ಚರ್ಚಿಸಿಲಾಯಿತು.
- ನೋಡಲ್ ಅಧಿಕಾರಿಯವರು ಮಾತನಾಡಿ ಅಗತ್ಯವಿರುವ ಸಿಬ್ಬಂದಿ ಹಾಗೂ ಕಸದ ಗಾಡಿಗಳಿಗೆ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.
- ಶ್ರೀಮತಿ.ಪೂರ್ಣಿಮಾ.ಜಿ.ಬಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ರವರು ಮಾತನಾಡಿ ಘನತ್ಯಾಜ್ಯ ಸಂಗ್ರಹಣಾ ಘಟಕಗಳನ್ನು ನಿರ್ವಹಿಸಲು ಸ್ಥಳೀಯ ಸಂಘ ಸಂಸ್ಥೆಗಳಿಗೆ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

2) **ವಾರ್ಡ್ ವ್ಯಾಪ್ತಿಯಲ್ಲಿನ ಪೋಲೀಸ್ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಗೆ ಬರುವ ಎಲ್ಲಾ ಶಾಲೆಗಳು ಇರುವ ರಸ್ತೆಗಳಲ್ಲಿ ರೋಡ್ ಹಂಪ್ಸ್‌ಗಳನ್ನು ಹಾಕುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ ಬಾರ್‌ಗಳ ಹತ್ತಿರ ಹೆಚ್ಚಿನ ಟ್ರಾಫಿಕ್ ಜಾಮ್ ಆಗುತ್ತಿದ್ದು, ಹಾಗೂ ರಾತ್ರಿ ವೇಳೆಯಲ್ಲಿ ಹೆಣ್ಣು ಮಕ್ಕಳುಗಳು ಹಾಗೂ ಜನಗಳು ಓಡಾಡಲು ಕಷ್ಟಕರವಾಗಿದ್ದು, ಸದರಿ ಬಾರ್‌ಗಳ ಹತ್ತಿರ ಹೆಚ್ಚಿನ ನಿಗಾವಹಿಸುವ ಬಗ್ಗೆ ಹಾಗೂ ಬಾರ್ ಮಾಲೀಕರುಗಳಿಗೆ ಇದರ ಬಗ್ಗೆ ಎಚ್ಚರಿಕೆ ನೀಡಿ ನೋಟೀಸ್ ನೀಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿನ ಅಂದ್ರಹಳ್ಳಿ ಅರಳಿಮರದ ಹತ್ತಿರ ಆಟೋಗಳು ಹೆಚ್ಚಾಗಿದ್ದು, ಬೇರೆ ವಾಹನಗಳು ಓಡಾಡಲು ಸ್ಥಳಾವಕಾಶವನ್ನು ನೀಡದೆ ರಸ್ತೆಗಳಲ್ಲಿಯೇ ಆಟೋಗಳನ್ನು ನಿಲ್ಲಿಸಿಕೊಂಡು ಟ್ರಾಫಿಕ್ ಜಾಮ್ ಮಾಡುತ್ತಿದ್ದು, ಸದರಿ ಆಟೋಗಳ ಮೇಲೆ ಕ್ರಮಕೈಗೊಂಡು ಎಚ್ಚರಿಕೆ ನೀಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

- ವಾರ್ಡ್ ವ್ಯಾಪ್ತಿಗೆ ಬರುವ ಎಸ್.ಎಲ್.ಎನ್ ಲೇಔಟ್‌ನಲ್ಲಿ ಪುಂಡು ಪೋಕರಿಗಳು ರಾತ್ರಿ ವೇಳೆಯಲ್ಲಿ ಮದ್ಯಪಾನ ಹಾಗೂ ಗಾಂಜವನ್ನು ಸೇವನೆ ಮಾಡುತ್ತಿದ್ದು, ಸದರಿ ಸ್ಥಳಕ್ಕೆ ರಾತ್ರಿಯ ವೇಳೆ ಬೀಟ್ ಹಾಕುವಂತೆ ಸೂಚಿಸಲಾಯಿತು.

**3) ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯ ಎಲ್ಲಾ ಸರ್ಕಾರಿ ಜಾಗಗಳನ್ನು ಸರ್ವೆ ಮಾಡಿ ವರದಿ ನೀಡುವಂತೆ ಶ್ರೀ.ಜಿ.ನಾಗಭೂಷಣ್ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿಯವರು ಸರ್ವೆ ಅಧೀಕ್ಷಕರವರಿಗೆ ಸಭೆಯಲ್ಲಿ ಪತ್ರವನ್ನು ನೀಡಿದರು.
- ವಾಡ್ ವ್ಯಾಪ್ತಿಯಲ್ಲಿನ ವಾಲ್ಮೀಕಿ ಸರ್ಕಲ್ ನಿಂದ ನವಿಲು ನಗರದ ವರೆಗೆ ಹಾಗೂ ನವಿಲು ನಗರದಿಂದ ಕರಿಹೋಬನಹಳ್ಳಿ ರುದ್ರ ಭೂಮಿವರೆಗೆ ರಸ್ತೆಯನ್ನು ಸರ್ವೆ ಮಾಡಿ ಕಚ್ಚಾ ನಕ್ಷೆಯೊಂದಿಗೆ ವರದಿ ನೀಡುವಂತೆ ಶ್ರೀ.ಜಿ.ನಾಗಭೂಷಣ್ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿಯವರು ಸರ್ವೆ ಅಧೀಕ್ಷಕರವರಿಗೆ ಸಭೆಯಲ್ಲಿ ಪತ್ರವನ್ನು ನೀಡಿದರು.
- ನೋಡಲ್ ಅಧಿಕಾರಿಯವರು ಮಾತನಾಡಿ ಸಹ ಕಂದಾಯ ಅಧಿಕಾರಿಯವರಿಗೆ ಈ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದರು.

**4) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ಸಹಾಯಕ ಅಭಿಯಂತರರಾದ ಶ್ರೀ.ಜಿ.ನಾಗಭೂಷಣ್‌ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಾರಂಭವಾಗಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಗೂ ಬೆಸ್ಕಾಂ ಇಲಾಖೆಯವರು ಒಳಚರಂಡಿ ಹಾಗೂ ಭೂಗತ ಕೇಬಲ್ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸಿಕೊಡಬೇಕೆಂದು ಸಂಬಂಧ ಪಟ್ಟ ಅಭಿಯಂತರರುಗಳಿಗೆ ಸೂಚಿಸಿದರು.

**5) ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಗ್ಗೆ ಚರ್ಚಿಸಲಾದ ವಿಷಯಗಳು**

- ಎಲ್&ಟಿ ಯವರು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್.ಎಸ್.ಸಿ ಛೇಂಬರ್ ಅಳವಡಿಸುವಾಗ ಸರಿಯಾದ ಇಳಿಜಾರನ್ನು ಮಾಡಬೇಕಾಗಿ ಸಭೆಯಲ್ಲಿ ಚರ್ಚಿಸಲಾಯಿತು.
- ಮೆಘಾ ಕನ್‌ಸ್ಟ್ರಕ್ಷನ್ ವತಿಯಿಂದ ಪೈಪ್ ಲೈನ್ ಕಾಮಗಾರಿ ಮಾಡಿದ ಸ್ಥಳಗಳಲ್ಲಿ ಧೂಳು ನಿಯಂತ್ರಣ ಮಾಡಲು ಟ್ಯಾಂಕರ್‌ಗಳ ಮೂಲಕ ನೀರು ಸಿಂಪಡಣೆ ಮಾಡುವಂತೆ ಸೂಚಿಸಿದರು.

**6) ವಾರ್ಡ್ ವ್ಯಾಪ್ತಿಯಲ್ಲಿನ ಬೆಸ್ಕಾಂ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ಬೆಸ್ಕಾಂ ಇಲಾಖೆಗೆ ಸಂಬಂಧಿಸಿದಂತೆ ಮುಂದಿನ ಸಭೆಯೊಳಗಾಗಿ ದೊಡ್ಡಬಿದರಕಲ್ಲು ಹಾಗೂ ಚನ್ನನಾಯಕನಪಾಳ್ಯ ಭಾಗಗಳಲ್ಲಿ ರಸ್ತೆಯಲ್ಲಿರುವ ವಿದ್ಯುತ್ ಕಂಬಗಳನ್ನು ಹಾಗೂ ಟ್ರಾನ್ಸ್‌ಫಾರ್ಮರ್ ಸ್ಥಳಾಂತರಿಸಬೇಕೆಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಿದರು.

**7) ವಾರ್ಡ್ ವ್ಯಾಪ್ತಿಯಲ್ಲಿನ ಕೆರೆಗಳ ವಿಭಾಗಗಳ ಬಗ್ಗೆ ಚರ್ಚಿಸಲಾದ ವಿಷಯಗಳು**

- ಲಿಂಗಧೀರನಹಳ್ಳಿ ಕೆರೆಯಲ್ಲಿ ಇರುವ ಎಸ್.ಟಿ.ಪಿ ಯನ್ನು ಸರಿಯಾಗಿ ನಿರ್ವಹಿಸುವ ಬಗ್ಗೆ ಚರ್ಚಿಸಲಾಯಿತು.
- ನೋಡಲ್ ಅಧಿಕಾರಿಯವರು ಮಾತನಾಡಿ ಕೆರೆಗಳಿಗೆ ನೇರವಾಗಿ ಒಳಚರಂಡಿ ನೀರು ಸೇರಿ ಕೆರೆಯ ನೀರು ಕಲುಷಿತವಾಗುತ್ತಿದ್ದು, ಇದರ ಬಗ್ಗೆ ಸರಿಯಾಗಿ ಕ್ರಮಕೂಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

8) ವಾರ್ಡ್ ವ್ಯಾಪ್ತಿಯಲ್ಲಿನ ತೋಟಗಾರಿಕೆ ವಿಭಾಗದ ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯಲ್ಲಿನ ಪಾರ್ಕ್‌ಗಳ ನಿರ್ವಹಣೆಗೆ ಹೆಚ್ಚಿನ ಅನುದಾನದ ಪ್ರಸ್ತಾವನೆ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

9) ವಾರ್ಡ್ ವ್ಯಾಪ್ತಿಯಲ್ಲಿನ ಎಸ್.ಡಬ್ಲ್ಯೂ.ಡಿ ಬಗ್ಗೆ ಚರ್ಚಿಸಲಾದ ವಿಷಯಗಳು

- ಅಮರನಾಥ್.ಎಂ, ಸಹಾಯಕ ಅಭಿಯಂತರರು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ಮಳೆ ನೀರುಗಾಲುವೆ ಅಭಿವೃದ್ಧಿಗಾಗಿ ಸುಮಾರು 50.00 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.
- ಸದಸ್ಯರು ಮಾತನಾಡಿ ಸದರಿ ಚಾಲ್ತಿಯಲ್ಲಿರುವ ಕಾಮಗಾರಿಯನ್ನು ವೇಗಗತಿಯಲ್ಲಿ ಮಾಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

7/3/22
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

ಅಧಿಕಾರಿಗಳ ಮಾಹಿತಿಗಾಗಿ

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
4. ಮಾನ್ಯ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರ ಮಾಹಿತಿಗಾಗಿ ಕಳುಹಿಸಿದೆ.
5. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ ರವರ ಮಾಹಿತಿಗಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
14. ವಲಯ ಅರಣ್ಯಾಧಿಕಾರಿಗಳು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
16. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
17. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.40, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
18. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ/ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
19. ಪರಿಸರ ಅಧಿಕಾರಿಗಳು ಮಾಲಿನ್ಯ ನಿಯಂತ್ರಣ ಮಂಡಳಿ ರವರ ಮಾಹಿಗಾಗಿ ಕಳುಹಿಸಿದೆ.